# ಗ್ರಂಥಾಲಯಗಳನ್ನು ಬಲಗೊಳಿಸಿ

ಓದುವ ಸಂಸ್ಕೃತಿ ಬೆಳೆದಷ್ಟೂ ಸಮಾಜವೊಂದು ಸುಸಂಸ್ಕೃತವಾಗುತ್ತದೆ. ಆಳುವವರಿಗೆ ಅದು ಬೇಕಿಲ್ಲವೆ?

'ಪುಸ್ತಕ ಮನುಷ್ಯನ ಅತ್ಯುತ್ತಮ ಗೆಳೆಯ; ಆತನ ಕಷ್ಟಕಾಲದಲ್ಲೂ ಮತ್ತು ಸಂತೋಷದ ಸಮಯದಲ್ಲೂ ಪುಸ್ತಕಗಳು ಸಂಗಾತಿಯಾಗಿರುತ್ತವೆ' ಎನ್ನುವುದೊಂದು ಲೋಕೋಕ್ತಿ. ಹಾಗೆಯೇ ಪತ್ರಿಕೆಗಳು ಮತ್ತು ನಿಯತಕಾಲಿಕೆಗಳು. ಮನುಷ್ಯನ ಸಾಮಾನ್ಯ ಜ್ಞಾನವನ್ನು ಹೆಚ್ಚಿಸುವುದರ ಜತೆಗೆ ಆತನನ್ನು ಮಾಹಿತಿಪೂರ್ಣಗೊಳಿಸಲೂ ಪತ್ರಿಕೆಗಳು ನೆರವಾಗುತ್ತವೆ. ಈಗ ತಂತ್ರಜ್ಞಾನ ಮುಂದುವರೆದು ಅಂತರ್ಜಾಲದ ಬಳಕೆ ವ್ಯಾಪಕವಾಗಿದ್ದರೂ ಪತ್ರಿಕೆಗಳು, ಪುಸ್ತಕಗಳು ಮತ್ತು ನಿಯತಕಾಲಿಕೆಗಳ ಮಹತ್ವ ಮತ್ತು ಜನಪ್ರಿಯತೆ ಕುಂದಿಲ್ಲ. ದಿನದ ಎಲ್ಲ ಪತ್ರಿಕೆಗಳನ್ನೂ, ವರ್ಷದಲ್ಲಿ ಪ್ರಕಟವಾಗುವ ಎಲ್ಲ ಪುಸ್ತಕಗಳನ್ನೂ ಖರೀದಿಸುವ ಸಾಮರ್ಥ್ಯ ಯಾರಿಗೂ ಇರುವುದಿಲ್ಲ. ಹಾಗಾಗಿ ಗ್ರಂಥಾಲಯಗಳಲ್ಲಿ ಓದುವವರ ಸಂಖ್ಯೆ ಹೆಚ್ಚಾಗಿದೆ. ಕನ್ನಡದಲ್ಲಿ ಪುಸ್ತಕಗಳೂ ದೊಡ್ಡ ಸಂಖ್ಯೆಯಲ್ಲಿ ಹೊರಬರುತ್ತಿವೆ ಹಾಗೂ ಮಾರಾಟವಾಗುತ್ತಿವೆ. ಗ್ರಂಥಾಲಯಗಳು ನಮ್ಮ ಸಂಸ್ಕೃತಿಯ ಅಂಗವಾಗಿಯೇ ಬೆಳೆದುಬಂದಿವೆ. ಈ ಸತ್ಯವನ್ನು ಆಳುವವರೂ ಅಲ್ಲಗಳೆಯುವುದಿಲ್ಲ. ನಾಲ್ಕು ತಿಂಗಳ ಹಿಂದೆ ಮೈಸೂರಿನ ನಗರ ಗ್ರಂಥಾಲಯದ ಶತಮಾನೋತ್ಸವ ಸಮಾರಂಭದಲ್ಲಿ ಭಾಗವಹಿಸಿದ ನಮ್ಮ ಮುಖ್ಯಮಂತ್ರಿಯವರೂ ಈ ಮಾತುಗಳನ್ನು ಒತ್ತಿ ಹೇಳಿದರು. 'ರಾಜ್ಯದ ಎಲ್ಲ 6000 ಗ್ರಾಮ ಪಂಚಾಯ್ತಿಗಳಲ್ಲೂ ಗ್ರಂಥಾಲಯಗಳನ್ನು ಸ್ಥಾಪಿಸಲಾಗುವುದು' ಎಂದೂ ಅವರು ಭರವಸೆ ಕೊಟ್ಟರು. ಆ ಸಮಾರಂಭದಲ್ಲಿ ಹಾಜರಿದ್ದ ಇನ್ನೊಬ್ಬ ಹಿರಿಯ ಸಚಿವರು, 'ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರು ಗ್ರಂಥಾಲಯಗಳನ್ನು ಅತ್ಯಂತ ಹೆಚ್ಚು ಬಳಕೆ ಮಾಡಿಕೊಂಡು ಬದುಕಿನಲ್ಲಿ ಯಶಸ್ವಿಯಾದವರು' ಎಂದೂ ನೆನಪಿಸಿದರು.

'ಎಲ್ಲವೂ ಭಾಷಣಕ್ಕೇ ಸರಿ' ಎನ್ನುವಂತಿದೆ ರಾಜ್ಯದ ಪರಿಸ್ಥಿತಿ. ನಗರಪಾಲಿಕೆ, ನಗರಸಭೆ, ಪುರಸಭೆ ಮತ್ತು ಗ್ರಾಮ ಪಂಚಾಯ್ತಿಗಳಲ್ಲಿ ಸಂಗ್ರಹವಾಗುವ ಆಸ್ತಿ ತೆರಿಗೆಯಲ್ಲಿ ಶೇಕಡಾ 6ರಷ್ಟು ಆದಾಯ ಗ್ರಂಥಾಲಯಗಳಿಗೆ ಹೋಗಬೇಕು ಎಂದು ಸ್ಥಳೀಯ ಸಂಸ್ಥೆಗಳ ಕಾಯ್ದೆ ಹೇಳುತ್ತದೆ. ಆದರೆ ಕಳೆದ ಐದು ವರ್ಷಗಳಿಂದ ಈ ಕಾನೂನು ಸರಿಯಾಗಿ ಪಾಲನೆಯೇ ಆಗಿಲ್ಲ. ರಾಜ್ಯದಾದ್ಯಂತ ಸ್ಥಳೀಯ ಸಂಸ್ಥೆಗಳು ಗ್ರಂಥಾಲಯ ಇಲಾಖೆಗೆ ನೀಡಲು ಬಾಕಿ ಇರುವ ಹಣ 380 ಕೋಟಿ ರೂಪಾಯಿ ಎನ್ನುವುದು ಇದೀಗ ಬಯಲಾಗಿದೆ. ಬಹುತೇಕ ಎಲ್ಲ ನಗರಪಾಲಿಕೆಗಳೂ ಗ್ರಂಥಾಲಯ ಕರ ಎಂದು ಸಂಗ್ರಹಿಸಿದ ಹಣವನ್ನು ಬೇರೆಯೇ ಕೆಲಸಕ್ಕೆ ಬಳಸಿಕೊಂಡಿವೆ. ಮುಖ್ಯಮಂತ್ರಿಯವರ ಮೈಸೂರು ಜಿಲ್ಲೆಯಲ್ಲೇ ನಗರಪಾಲಿಕೆ ಸಂಗ್ರಹಿಸಿದ 9 ಕೋಟಿ ರೂಪಾಯಿಗಳನ್ನು ಗ್ರಂಥಾಲಯ ಇಲಾಖೆಗೆ ಪಾವತಿಸಿಲ್ಲ. 'ಪೂರ್ಣ ಸಾಕ್ಷರರ ಜಿಲ್ಲೆ' ಎಂದು ಹೆಸರು ಪಡೆದಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಒಂದು ಕೋಟಿ ರೂಪಾಯಿ ಬಾಕಿ ಇದೆ. ಹುಬ್ಬಳ್ಳಿ, ಕಲ್ಬುರ್ಗಿ, ಬೆಳಗಾವಿ, ದಾವಣಗೆರೆಗಳಲ್ಲೂ ಪರಿಸ್ಥಿತಿ ಭಿನ್ನವಾಗಿಲ್ಲ.

ಸ್ಥಳೀಯ ಸಂಸ್ಥೆಗಳು ಒಂದು ಬಾಬ್ತಿಗಾಗಿ ಸಂಗ್ರಹಿಸಿದ ಹಣವನ್ನು ಬೇರೆ ಬಾಬ್ತಿಗೆ ಖರ್ಚು ಮಾಡಿದರೆ ಅದು ಆರ್ಥಿಕ ಅಪರಾಧ ಆಗುವುದಿಲ್ಲವೆ? ಅದರಲ್ಲೂ ಗ್ರಂಥಾಲಯ ಇಲಾಖೆ ಸಿಬ್ಬಂದಿ ಕೊರತೆಯಿಂದ ನರಳುತ್ತಿದ್ದು, ಸೂಕ್ತ ಮೂಲಸೌಲಭ್ಯಗಳಿಗೆ ಕಾದುಕೊಂಡಿರುವಾಗ ಈ ರೀತಿ ಆದಾಯ ವ್ಯತ್ಯಯ ಮಾಡುವುದು ಎಷ್ಟು ಸರಿ? ಗ್ರಾಮ ಪಂಚಾಯ್ತಿ ಮಟ್ಟದಲ್ಲೂ ಪರಿಸ್ಥಿತಿ ಹೀಗೆಯೇ ಇದೆ. ಸಾಕ್ಷರ ಜಿಲ್ಲೆಯಾದ ದಕ್ಷಿಣ ಕನ್ನಡದಲ್ಲೇ 204 ಗ್ರಾಮ ಪಂಚಾಯ್ತಿಗಳಲ್ಲಿ ಕೇವಲ 4–5 ಕಡೆ ಮಾತ್ರ ಗ್ರಂಥಾಲಯಗಳಿವೆ. ಗ್ರಂಥಾಲಯ ಇಲಾಖೆಗೆ ರಾಜ್ಯ ಸರ್ಕಾರದಿಂದ ನೇರವಾಗಿ ಸಿಗುವ ಆದಾಯ ಕಡಿಮೆಯೇ. ಕೆಲವು ಉನ್ನತ ಹುದ್ದೆಗಳ ಸಂಬಳ ಬಿಟ್ಟರೆ, ಗ್ರಾಮ ಪಂಚಾಯ್ತಿಗೆ ಪತ್ರಿಕೆ ಖರೀದಿಗೆ ರಾಜ್ಯ ಸರ್ಕಾರ ಕೊಡುವುದು ತಿಂಗಳಿಗೆ 400 ರೂಪಾಯಿ ಮಾತ್ರ. ಆ ಹಣದಲ್ಲಿ ಎಷ್ಟು ಪತ್ರಿಕೆಗಳ ಖರೀದಿ ಸಾಧ್ಯವಿದೆ? ರಾಜ್ಯದಾದ್ಯಂತ ಗ್ರಂಥಾಲಯಗಳಲ್ಲಿ ಮುಖ್ಯ ಗ್ರಂಥಪಾಲಕರು, ಸಹಾಯಕರು ಮುಂತಾಗಿ 354 ಹುದ್ದೆಗಳು ಖಾಲಿ ಬಿದ್ದಿವೆ. ಅವುಗಳನ್ನು ತುಂಬುವ ಬಗ್ಗೆ ಕೆಪಿಎಸ್‌ಸಿ ಗೆ ಅಷ್ಟು ಉತ್ಸಾಹವೂ ಇದ್ದಂತಿಲ್ಲ. 380 ಕೋಟಿ ರೂಪಾಯಿ ಬಾಕಿ ಹಣ ಈ ವರ್ಷದ್ದೂ ಅಲ್ಲ; ಕಳೆದ ಐದು ವರ್ಷಗಳಿಂದ ಇದು ಹೀಗೆಯೇ ನಡೆಯುತ್ತಿದೆ! ಕಳೆದ ವರ್ಷ ರಾಜ್ಯದಲ್ಲಿ ಸುಮಾರು 3700 ಹೊಸ ಪುಸ್ತಕಗಳು ಪ್ರಕಟವಾಗಿವೆ. ಗ್ರಂಥಾಲಯ ಇಲಾಖೆ 2012ರಲ್ಲಿ ಖರೀದಿಸಿದ ಪುಸ್ತಕಗಳ ದುಡ್ಡೇ ಇನ್ನೂ ಪ್ರಕಾಶಕರಿಗೆ, ಲೇಖಕರಿಗೆ ಸಿಕ್ಕಿಲ್ಲ. ಇನ್ನು ಹೊಸ ಪುಸ್ತಕಗಳನ್ನು ಖರೀದಿಸುವುದು ದೂರವೇ ಉಳಿಯಿತು. ಓದುವ ಅಭಿರುಚಿ ಹೆಚ್ಚಿದಷ್ಟೂ ಒಂದು ಸಮಾಜ ಸುಸಂಸ್ಕೃತವಾಗುತ್ತದೆ. ಆಳುವವರಿಗೆ ಅದು ಬೇಕಿಲ್ಲವೆ?

■ ಬಿ.ಎಂ.ಹನೀಫ್

